(ಖ) ಸೂಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಪಂಗಡದವರಿಗೆ ಜಾತಿ ಪ್ರಮಾಣ ಪತ್ರ ನೀಡುವಲ್ಲಿ ಆಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಎಸ್. ಅಂಗಾರ (ಸೂಳ್ಯ) :— ಮಾನ್ಯ ಅಧ್ಯಕ್ಷರೆ, ನನ್ನ ಸೂಳ್ಯ ಕ್ಷೇತ್ರದಲ್ಲಿ 25 ವರ್ಷಗಳಿಂದ ಅನೇಕ ತಮಿಳು ಕುಟುಂಬಗಳು ವಾಸಿಸುತ್ತಿದ್ದು, ಅವುಗಳಲ್ಲಿ ಅನೇಕವು ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಾತಿ ಪಟ್ಟಿಯಲ್ಲಿ ಅವರ ಜಾತಿ ಹೆಸರು ಸೇರ್ಪಡೆಯಾಗಿದ್ದರೂ ಜಾತಿ ಪ್ರಮಾಣ ಪತ್ರ ನೀಡುವವರು ತುಂಬಾ ತೊಂದರೆ ನೀಡುತ್ತಿದ್ದು ಅನೇಕ ವಿದ್ಯಾರ್ಥಿಗಳಿಗೆ ಶಾಲೆ-ಕಾಲೇಜು ಸೇರ್ಪಡೆ ಮಾಡಲು ತುಂಬಾ ತೊಂದರೆಯಾಗಿದೆ. ಈ ಬಗ್ಗೆ ಸಮಾಜ ಕಲ್ಯಾಣಾಧಿಕಾರಿ, ಮಂಗಳೂರು ಇವರು ಕೂಡ ಜಿಲ್ಲಾಧಿಕಾರಿಗಳೊಡನೆ ಸಭೆ ಕರೆದು ಜಾತಿ ಪ್ರಮಾಣ ಪತ್ರ ನೀಡಬೇಕೆಂದು ಹೇಳಿದ್ದರೂ ಕೂಡ ತಹಶೀಲ್ದಾರರು ಮಾತ್ರ ಪ್ರಮಾಣ ಪತ್ರ ನೀಡಲು ನಿರಾಕರಿಸುತ್ತಿದ್ದಾರಲ್ಲದೆ ತಮಿಳು ಪರಿಶಿಷ್ಟ ಜಾತಿ ಪಂಗಡದ ಕಾರ್ಮಿಕರು ಜಾತಿ ಪ್ರಮಾಣ ಪತ್ರ ಕೇಳಲಿಕ್ಕೆ ಹೋದಾಗ ನೀವು ತಮಿಳುನಾಡಿಗೆ ಹೋಗಿ, ಶ್ರೀಲಂಕಾಕ್ಕೆ ಹೋಗಿ ಜಾತಿ ದೃಢೀಕರಣ ಪತ್ರ ತರಬೇಕೆಂದು ಹೇಳುತ್ತಿದ್ದಾರೆ. ಇದರಿಂದ ತುಂಬಾ ಜನರಿಗೆ ತೊಂದರೆಯಾಗಿದೆ. ಆದಷ್ಟು ಶೀಘ್ರದಲ್ಲಿ ಅದನ್ನು ಒದಗಿಸಿಕೊಡುವ ಕ್ರಮಕ್ಕೆಗೊಳ್ಳಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ತಹಶೀಲ್ದಾರ್‌ರವರ ಕಛೇರಿಯಲ್ಲಿ ಜಾತಿ ಪ್ರಮಾಣಪತ್ರ ವಿತರಿಸುವ ಕೆಲಸ ಬಹಳ ಕಷ್ಟಕರವಾದುದು ಮತ್ತು ಪ್ರಮಾಣಪತ್ರ ಪದ್ಧತಿಯೂ ಸಹ ಸರಿಯಿಲ್ಲ. ಜಾತಿ ಇಲ್ಲದವರು ಜಾತಿ ಪ್ರಮಾಣಪತ್ರ ತೆಗೆದುಕೊಳ್ಳುವ ಪರಿಪಾಠ ಜಾಸ್ತಿಯಾಗುತ್ತಿದೆ. ಹೀಗಾಗಿ ನಿರ್ದೇಶನ ಕೊಡುವುದರಲ್ಲಿ ಸ್ವಲ್ಪ, ವಿಳಂಬ, ಗೊಂದಲವಾಗಿರಬಹುದು. ಆ ತಾಲ್ಲೂಕು ತಹಶೀಲ್ದಾರ್‌ರವರಿಂದ ಮತ್ತು ಜಿಲ್ಲಾಧಿಕಾರಿಗಳ ಮುಖಾಂತರ ನಾನು ವರದಿಯನ್ನು ತರಿಸಿಕೊಂಡು ಏನು ತೊಂದರೆಯಾಗಿದೆ, ಸಮಾಜಕಲ್ಯಾಣ ಇಲಾಖೆಯಿಂದ ಏನಾದರೂ ಗೊಂದಲವಾದ ಪರಿಸ್ಥಿತಿ ಇದೆಯೇ ಎಂಬುದನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಜಾತಿಗಳು ಬೇರೆ ಬೇರೆ ಸೇರಿರುತ್ತವೆ. ಆದರಿಂದ ನಮ್ಮ ರಾಜ್ಯದಲ್ಲಿರುವ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಬೇರೆ ರಾಜ್ಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿರಬಹುದು. ಹೀಗಾಗಿ ಕೆಲವು ಗೊಂದಲ ಇರುತ್ತವೆ. ಅದರ ಬಗ್ಗೆ ಸ್ಪಷ್ಟೀಕರಣ ಕೇಳಿ ನಾನು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(8) ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಕುರಿತು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ (ಗ್ರಾ) :— ಮಾನ್ಯ ಅಧ್ಯಕ್ಷರೆ, ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಏನಿದೆ ಇದು 1976ನೇ ಇಸವಿಯದು ಕೇಂದ್ರ ಸರ್ಕಾರದವರು